ರಷ್ಟನ್ನು ಕೊಡುವುದಾಗಿ ಒಪ್ಪಿ ಆ ಬಗ್ಗೆ ಒಂದು ರೆಸಲ್ಯೂಷನ್ನನ್ನು ಮಾಡಿ ಕಳುಹಿಸಿದ್ದರು. ಇನ್ನು 7 ಹಳ್ಳಿಯವರು ಆ ರೀತಿಯಾಗಿ ರೆಸಲ್ಯೂಷನ್ ಮಾಡಿ ಕಳುಹಿಸಿರಲಿಲ್ಲ. ಅನಂತರ ಆ 7 ಹಳ್ಳಿಯವರೂ ಒಂದು ರೆಸಲ್ಯೂಷನ್ನ ಮಾಡಿ ಕಳುಹಿಸಿಕೊಟ್ಟರು, ಅದು ಸ್ವಲ್ಪ ನಿಧಾನವಾದ್ದರಿಂದ ಕೆಲಸ ನಿಧಾನವಾಯಿತು. ಆದರೆ ಅಲ್ಲಿ ಈಗಾಗಲೇ 6 ಹಳ್ಳಿಗಳ ಕೆಲಸ ಮುಗಿದಿದೆ, ಇನ್ನು ಒಂದು ಹಳ್ಳಿಯ ಕೆಲಸವೂ ಮುಗಿಯುತ್ತಾ ಬಂದಿದೆಯೆಂದು ವರದಿ ಬಂದಿದೆ. ಅಲ್ಲಿಗೆಲ್ಲಾ ಈಗ ನೀರನ್ನು ಸರಬರಾಯಿ ಮಾಡಿದಂತಾಗಿದೆ.

ಶ್ರೀ ಜೆ. ದೇವಯ್ಯ —ಆ 17 ಹಳ್ಳಿಗಳು ಯಾವುವು ?

ಅಧ್ಯಕ್ಷರು.—ಅದನ್ನು ತಿಳಿಸುತ್ತಾರೆ.

ಶ್ರೀ ಜೆ. ದೇವಯ್ಯ.—18 ಹಳ್ಳಿಗಳಲ್ಲಿ ಆ 7 ಹಳ್ಳಿಗಳು ಯಾವುವು ?

ಶ್ರೀ ಆರ್. ಎಂ. ಪಾಟೀಲ್.—ಉಮ್ಮಡಿ, ಕೀಲಾರ, ಕೊತಲಿ, ಬನ್ನಾಳು, ಕೆಂಗೆರೆ, ಗುತ್ತಲು, ಅರಕೆರೆ. 7 ಗ್ರಾಮಗಳಲ್ಲಿ ಮೊದಲು 6 ಗ್ರಾಮಗಳಿಗೆ ಅಂದರೆ ಬನ್ನಾಳನ್ನು ಬಿಟ್ಟು ಇನ್ನುಳಿದ ಗ್ರಾಮಗಳಿಗೆ ನೀರು ಸರಬರಾಯಿ ಆಗಿತ್ತೆಂದೂ ಬನ್ನಾಳಿಗಿನ್ನೂ ನೀರು ಸರಬರಾಯಿ ಆಗಿಲ್ಲವೆಂದೂ ಇಲ್ಲಿ ಉತ್ತರದಲ್ಲಿ ತಿಳಿಸಲಾಗಿತ್ತು. ಆದರೆ ನನಗೆ ಬಂದಿರುವ ತಾ: 19-11-66 ವರದಿ ಪ್ರಕಾರ ಈಗ ಈ ಬನ್ನಾಳಿಗೂ ನೀರು ಸರಬರಾಯಿ ಕೊಟ್ಟಿದೆ ಎಂದು ತಿಳಿದುಬಂದಿದೆ.

ಶ್ರೀ ಜಿ. ರಾಮೇಗೌಡ —ಈಗ ತಾವು ಹೇಳಿದ 10 ಪರ್ಸೆಂಟ್ ಕ್ಯಾಪಿಟೆಲ್ ಧಾರ್ಜನ್ನು 5 ಪರ್ಸೆಂಟಿಗೆ ಇಳಿಸುವುದಾಗಿ ಹಿಂದೆ ಇದ್ದ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದರು, ಆ ವಿಚಾರ ವೇನು ?

ಶ್ರೀ ಆರ್. ಎಂ. ಪಾಟೀಲ್.—ಹಣಕಾಸಿನ ವಿಚಾರದಲ್ಲಿ ಬಹಳ ನಿಕೃಷ್ಟ ಪರಿಸ್ಥಿತಿಯಲ್ಲಿದ್ದ ಕೆಲವು ಗ್ರಾಮಗಳಿಗೆ 5 ಪರ್ಸೆಂಟನ್ನೇ ಹಾಕರಾಗಿದೆ.

ಶ್ರೀ ಜೆ. ದೇವಯ್ಯ.—ಈಗ ತಾವು ಹೇಳಿದ ಗ್ರಾಮಗಳಲ್ಲಿ ಹುಂಡಳ್ಳಿಗೇಕೆ ನೀರನ್ನು ಕೊಟ್ಟಿಲ್ಲ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ವಿಚಾರ ಮಾಡುತ್ತೇನೆ.

Roads taken over by Public Works Department in Kanakapura taluk.

*Q.—56. **Sri S. KARIAPPA** (Kanakapura).—

Will the Minister for Public Works be pleased to state :—

(*a*) the names of roads in Kanakapura taluk with their respective length, taken under Public Works Department with the year of taking during the past three years ;

(*b*) the amount spent on each of them ?

*A.—**Sri G. B. SHANKARA RAO** (Parliamentary Secretary to the Minister for Public Works)

(*a*) Year	Name of Road Taken	Length over	M	F
1963–64	Sathanur to Somanakere Road		5	0
1964–65	Nil			—
1965–66				
	(*a*) Somanakere to Muthathi Temple Road		6	0
	(*b*) Kabbal Goravanapura Road		5	0

(SRI G. B. SHANKAR RAO)

(*b*) Name of Road	Amount spent.
	Rs.
1 Sathanur to Somanakere Road	24,401
2 Somanakere to Muthathi temple Road.	—
3 Kabbal Goravanapura Road.	Nil

ಶ್ರೀ ಎಸ್. ಕರಿಯಪ್ಪ —ಸರ್ಕಾರದವರು ಈ ರಸ್ತೆಗಳನ್ನು ತಮ್ಮ ವಶಕ್ಕೆ ವಹಿಸಿಕೊಳ್ಳುವಾಗ ಆ ರಸ್ತೆಗಳ ಪ್ರಾಮುಖ್ಯತೆ ಮತ್ತು ಅವು ಜನರಿಗೆಷ್ಟು ಪ್ರಯೋಜನಕಾರಿಯಾಗಿರುತ್ತವೆ ಎಂಬುದನ್ನು ನೋಡಿತಾನೆ ಅವುಗಳನ್ನು ವಹಿಸಿಕೊಂಡಿದ್ದು ?

† ಶ್ರೀ ಜಿ. ಬಿ. ಶಂಕರರಾವ್.—ಹೌದು.

ಶ್ರೀ ಎಸ್. ಕರಿಯಪ್ಪ.—ಸರ್ಕಾರದವರು ವಹಿಸಿಕೊಂಡ 3 ರಸ್ತೆಗಳಲ್ಲಿ ಒಂದನ್ನು ಮಾಡಿ ಇನ್ನು ಎರಡು ರಸ್ತೆಗಳ ಕೆಲಸದ ಬಗ್ಗೆ ದುಡ್ಡನ್ನೂ ಖರ್ಚುಮಾಡದೆ ಕೆಲಸವನ್ನೂ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್.—ಕೆಲವು ಕಡೆ ದುಡ್ಡನ್ನು ಖರ್ಚುಮಾಡಲಾಗಿದೆ. ಆದರೆ ಇನ್ನು ಕೆಲವು ಕಡೆ ತಾಲ್ಲೂಕ್ ಬೋರ್ಡಿನವರು ಆ ಕೆಲಸಗಳನ್ನು ಸರ್ಕಾರಕ್ಕೆ ಇನ್ನೂ ವಹಿಸಿಲ್ಲ. ವಹಿಸಿರ ತಕ್ಕ ಕಡೆ ದುಡ್ಡೂ ಖರ್ಚಾಗಿದೆ, ಕೆಲಸವೂ ಆಗಿದೆ. ತಾಲ್ಲೂಕ್ ಬೋರ್ಡಿನವರು ನಿಧಾನ ಮಾಡಿದರೆ ನಾವೇನು ಮಾಡುವುದಕ್ಕಾಗುವುದು ?

ಶ್ರೀ ಎಸ್. ಎಂ. ಕೃಷ್ಣ.—ಅವರು ಏನು ಕಾರಣದಿಂದ ವಹಿಸಿಕೊಟ್ಟಿಲ್ಲ ?

ಶ್ರೀ ಜಿ. ಬಿ. ಶಂಕರರಾವ್.—ಅದು ಅವರಿಗೇ ಗೊತ್ತು. ಅದನ್ನು ನಾನು ಹೇಗೆ ಹೇಳಲಿ ?

ಶ್ರೀ ಎಸ್. ಕರಿಯಪ್ಪ —ಸಾತನೂರು ಸೋಮನಕೆರೆ ರಸ್ತೆಯು ಸೋಮನಕೆರೆ ಹತ್ತಿರವೇ ನಿಂತು ಹೋಗುವುದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್.—ನಮ್ಮ ವಶಕ್ಕೆ ತೆಗೆದುಕೊಂಡಿದ್ದ ರಸ್ತೆ ಸಾತನೂರಿಂದ ಸೋಮನಕೆರೆಯವರೆಗೆ ಮಾತ್ರ ; ಅಲ್ಲಿಯವರೆಗೂ ಕೆಲಸವಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ರಸ್ತೆಯನ್ನು ಉತ್ತಮಗೊಳಿಸುವುದಕ್ಕಿದ್ದ ಪ್ರಾಮುಖ್ಯತೆ ಯಾದರೂ ಏನು ?

ಶ್ರೀ ಜಿ. ಬಿ. ಶಂಕರರಾವ್.—ಅದನ್ನು ಇಂಪ್ರೂವ್ ಮಾಡತಕ್ಕ ಅವಶ್ಯಕತೆಯಿತ್ತು, ಆದುದರಿಂದ ಅದನ್ನು ತೆಗೆದುಕೊಳ್ಳಲಾಗಿತ್ತು.

ಶ್ರೀ ಜಿ. ರಾಮೇಗೌಡ.—ತಾಲ್ಲೂಕ್ ಬೋರ್ಡಿನವರು ತಮಗೆ ಆ ರಸ್ತೆಯನ್ನು ವಹಿಸಿಕೊಡುವುದಿಲ್ಲವೆಂದು ಬರೆದುಕೊಟ್ಟಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಹಾಗೇನೂ ಅವರು ಬರೆದುಕೊಟ್ಟಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಸೋಮನಕೆರೆಯಿಂದ ಮುಂದೆ ಸ್ವಲ್ಪದೂರದಲ್ಲೇ ಆ ರಸ್ತೆಯನ್ನು ಕಾಡಿನಲ್ಲೇ ನಿಲ್ಲಿಸುವುದಕ್ಕೆ ಕಾರಣವೇನು ?

(ಉತ್ತರವಿಲ್ಲ.)

ಶ್ರೀ ಕೆ. ಪಿ. ದೇವಣಸಿದ್ದಪ್ಪ.—ಸೋಮನಕೆರೆ ರಸ್ತೆಯನ್ನು ಜನರು ತಿರುಗಾಡದ ಕಡೆ ಅಲ್ಲಿ ಏಕೆ ನಿಲ್ಲಿಸಿದಿರಿ ?

ಶ್ರೀ ಜಿ. ಬಿ. ಶಂಕರರಾವ್.—ಆ ರಸ್ತೆಯನ್ನು ಸೋಮನಕೆರೆ ಒಂದಕ್ಕೇ ಮಾಡಲಲ್ಲ. ಬೇರೆ ಗ್ರಾಮಗಳಿಗೂ ಅನುಕೂಲವಾಗಲೆಂದು ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಹಳ್ಳಿಯಿಲ್ಲದ ಕಡೆ ಕಾಡಿನಲ್ಲಿ ಆ ರಸ್ತೆಯನ್ನು ನಿಲ್ಲಿಸಿ, ಅದನ್ನು ಶ್ರೀಮಾನ್ ಶಿವಲಿಂಗೇಗೌಡರಿಗೆ ಮಾತ್ರ ಮಾಡಿಕೊಟ್ಟು ಅಲ್ಲಿಗೆ ಕೈ ಬಿಡಲಾಗಿದೆ. ಈಗ ರಸ್ತೆ ನಿಂತಿರುವ ಸ್ಥಳಕ್ಕೆ ಯಾವ ಊರು ಯಾವ ಕೇರಿ ಎಷ್ಟು ಹತ್ತಿರದಲ್ಲಿದೆ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಕಾಡಿಗೆ ಹೋಗುವುದಕ್ಕಾದರೂ ದಾರಿ ಇರಬೇಡವೇ ?

Mr. SPEAKER.—The next two questions will be held over. The Hon'ble Minister for Health is away. Next Question No. 41

Sri S. SIVAPPA.—On a point of order, Sir. Only the other day the Chief Minister was pleased to state they worked on joint responsibility and that there is no need for a particular Minister to be present here and that any Minister can take take up responsibility and fulfil the obligations pertaining to that Ministry. Today the Health Minister is not here. I think the joint responsibility is still there.

Mr. SPEAKER.—An important point has been raised. I will give my considered and learned ruling on this tomorrow.

Sri S. M. KRISHNA.—Is the hon'ble Health Minister out of Town or is his health not all right?

1-30 P.M.

Mr. SPEAKER.—I am not concerned with the reasons.

Sri S. M. KRISHNA.—The hon'ble Minister has gone to South Kanara to declare open a school in his new constituency.

Mr. SPEAKER.—I take strong objection to this part of the question by the Hon'ble Member Sri Krishna. He knows the reason and puts the Question. After Question Hour, let us see.

Sri C. J. MUCKANNAPPA.—Will you allow us to discuss this issue about joint responsibility after the Question Hour?

Mr. SPEAKER.—I give no undertaking. The question Hour should not be disturbed.

Arrears of Rebate to be paid to the Gajendra Gada Weavers' Co-operative Society.

*ಶ್ರೀ.—41. Sri A. J. DODDAMETI (Ron).—

Will the Minister for Co-operation and Housing be pleased to state:—

(*a*) the amount of arrears of rebate that is to be paid to the Gajendragada Weavers' Co-operative Society, Ron Taluk, Darwar District;

(*b*) when the same would be paid?

A.—Sri KONDAJJI BASAPPA (Deputy Minister for Co-operation).—

(*a*) Rs. 840—14 paise

(*b*) As early as practicable.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸಹಕಾರ ಸಂಘಕ್ಕೆ ಕೊಡಬೇಕಾಗಿರುವ ಹಣ ಎಷ್ಟು?

†ಶ್ರೀ ಕೊಂಡಜ್ಜಿ ಬಸಪ್ಪ.—63,310 ಕ್ಕೆ ಕ್ಲೈಮ್ಸ್ ಇತ್ತು. ಈಗ 840-14 ರೂಪಾಯಿಗಳು ಬಾಕಿ ಇದೆ.

ಶ್ರೀ ಎ. ಜೆ. ದೊಡ್ಡಮೇಟಿ.—ತಾರೀಖುವಾರು ಹೇಳಿ.